4)	ಕ ಗಂ ಮ ಶಾಲೆ, ಬಾಗೇವಾಡಿ	2
5)	ಕ ಗಂ ಮ ಶಾಲೆ, ಉಕ್ಕಲಿ	2
6)	ಕ ಹೆ ಮ ಶಾಲೆ, ಮನಗೂಳಿ	2

ಮುದ್ದೇಬಿಹಾಳ್ ತಾಲ್ಲೂಕ್

1)	ಕ ಗಂ ಮ ಶಾಲೆ, ಮುದ್ದೇಬಿಹಾಳ್	4

ಸಿಂಧಗಿ ತಾಲ್ಲೂಕ್

1)	ಕ ಗಂ ಮ ಶಾಲೆ, ಬೋರಗಿ	2
2)	ಉ ಹೆ ಮ ಶಾಲೆ,ಅಲಮೇಲ	2
3)	ಕ ಗಂ ಮ ಶಾಲೆ,ಸೊಂಗಚಾಣ	3
4)	ಉ ಗಂ ಮ ಶಾಲೆ, ಕೋರವಾರ	3
		38

ಪ್ರಾಥಮಿಕ ಸೇರ್ಪಡೆ ಮತ್ತು ಮಾರ್ಪಾಡು

ಅನುದಾನ ಒದಗಿಸಿರುವುದಿಲ್ಲ.

ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆಯ ವಿವರ

859 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರನೀಡುವುದು)

ಇ) 1994-95ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಗುತ್ತಿಗೆ ಆಧಾರದ ಮೇಲೆ ನೇಮಿಸಿ ಕೊಂಡ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಈ) 1995-96ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) :

ಅ) ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 551 ವೈದ್ಯರ ಹುದ್ದೆಗಳು ಖಾಲಿ ಇವೆ. (ಪಟ್ಟಿಲಗತ್ತಿಸಿದೆ).

ಆ) ಖಾಲಿ ಹುದ್ದೆಯ ಪಟ್ಟಿ ಲಗತ್ತಿಸಿದೆ.

(ನಿರ್ದಿಷ್ಟ ಅವಧಿಯ ಬಗ್ಗೆ ಕಾಲಾವಕಾಶ ಬೇಕಾಗುತ್ತದೆ)

ಇ) 1994-95ರ ಸಾಲಿನಲ್ಲಿ 814 ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ. ತಾಲ್ಲೂಕುವಾರು ವಿವರ ನೀಡಲು ಕಾಲಾವಕಾಶ ಬೇಕಾಗುತ್ತದೆ.

ಈ) 1995-96ನೇ ಸಾಲಿನಲ್ಲಿ 3 ಜಿಲ್ಲೆಗಳಲ್ಲಿ 39 ವೈದ್ಯರುಗಳನ್ನು ಭರ್ತಿ ಮಾಡಲಾಗಿದೆ. (ಮಂಡ್ಯ - 16, ಕೋಲಾರ - 11, ಚಿತ್ರದುರ್ಗ - 12). ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವೈದ್ಯಾಧಿಕಾರಿಗಳ ಖಾಲಿ ಹುದ್ದೆ ವಿವರ (ಜಿಲ್ಲಾವಾರು)

ಕ್ರ.ಸಂ.	ಜಿಲ್ಲೆ	ನಗರ	ಗ್ರಾಮಾಂತರ	ಒಟ್ಟು
1)	ಗುಲ್ಬರ್ಗಾ	13	38	51
2)	ರಾಯಚೂರು	12	28	40
3)	ಬಳ್ಳಾರಿ	6	29	35
4)	ಬೀದರ್	-	9	9
		31	**104**	**135**
5)	ಮೈಸೂರು	6	14	20
6)	ಮಂಡ್ಯ	4	16	20
7)	ದಕ್ಷಿಣ ಕನ್ನಡ	8	38	46
8)	ಕೊಡಗು	7	9	16
9)	ಚಿಕ್ಕಮಗಳೂರು	11	22	33
10)	ಹಾಸನ	6	33	39
		42	**132**	**174**
11)	ತುಮಕೂರು	3	23	26
12)	ಚಿತ್ರದುರ್ಗ	7	12	19
13)	ಕೋಲಾರ	7	21	28

14)	ಶಿವಮೊಗ್ಗ	15	18	33
		32	**74**	**106**
15)	ಬೆಳಗಾಂ	4	22	26
16)	ಕಾರವಾರ	5	30	35
17)	ಬಿಜಾಪುರ	1	28	29
18)	ಧಾರವಾಡ	11	13	24
		21	**93**	**114**
19)	ಬೆಂಗಳೂರು	4	7	11
20)	ಬೋಧಕ ಆಸ್ಪತ್ರೆಗಳು	21	-	21
		25	7	32
	ಒಟ್ಟು	**151**	**410**	**561**

ಆಸ್ಪತ್ರೆಗಳಿಗೆ ಬಿಡುಗಡೆ ಮಾಡಿರುವ ಔಷಧದ ಬಗ್ಗೆ

860 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1992-93, 1993-94 ಮತ್ತು 94-95ನೇ ಸಾಲಿನಲ್ಲಿ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಸರ್ಕಾರ ನಿಗಧಿಪಡಿಸಿ ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಾಡದೇ ಉಳಿಸಿದ ಔಷಧ ಮೊತ್ತವೆಷ್ಟು? (ಪ್ರತ್ಯೇಕ ವಿವರ ಒದಗಿಸುವುದು)*

ಆ) *ನಿಗಧಿಗೊಳಿಸಿದ ಆಯವ್ಯಯ ಮೊತ್ತದಲ್ಲಿ 1993,94,95 ಮಾರ್ಚ್ ತಿಂಗಳಲ್ಲಿ ಬಿಡುಗಡೆಯಾದ ಮೊತ್ತವೆಷ್ಟು?*

ಇ) *ಪ್ರತಿ ಆಸ್ಪತ್ರೆಗಳಿಗೆ ನಿಗಧಿಗೊಳಿಸಿದ ಒಟ್ಟು ಮೊತ್ತವೆಷ್ಟು?*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯಕ್ಕೆ ಒಳಪಡುವ ಆಸ್ಪತ್ರೆಗಳಿಗೆ ಸರ್ಕಾರ ನಿಗಧಿಪಡಿಸಿರುವ ಮತ್ತು ಬಿಡುಗಡೆ ಮಾಡಿರುವ ಹಣ ಹಾಗೂ ವೆಚ್ಚ ಮಾಡದೇ ಉಳಿಸಿದ ಔಷಧಿಗಳ ಮೊತ್ತದ ಈ ವಿವರಗಳು ಕೆಳಕಂಡಂತಿವೆ.